# ಸರ್ವೋದಯ ಆಂಗ್ಲ ಪ್ರೌಢಶಾಲೆ

## ಕೆ.ಎಚ್.ಬಿ ಕಾಲೋನಿ-ಕುಣಿಗಲ್

ಅಂಕಗಳು ೩೦

ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟೆಂಬರ್–2019 ಸಮಯ: ೩ಗಂಟೆಗಳು

ತರಗತಿ :೦೯ ವಿಷಯ : ಪ್ರಥಮ ಭಾಷೆ ಕನ್ನಡ

---

**ಸೂಚನೆಗಳು:** *ಪ್ರಶ್ನೆಗಳ ಸಂಖ್ಯೆಯನ್ನು ಅನುಕ್ರಮವಾಗಿಯೇ ನಮೂದಿಸಿರಬೇಕು.
*ಪ್ರಶ್ನೆಯನ್ನು ಚೆನ್ನಾಗಿ ಓದಿ ಅರ್ಥೈಸಿಕೊಂಡು ಉತ್ತರಿಸಬೇಕು.
*ಉತ್ತರವನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಬರೆಯಬೇಕು.

**ಅ) ಈ ಕೆಳಗಿನ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದುದನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **6x1=6**

೧. ಈ ಕೆಳಗಿನ ಪದಗಳಲ್ಲಿ ವೃದ್ಧಿ ಸಂಧಿಗೆ ಉದಾಹರಣೆಯಾದ ಪದ

ಎ)ಜನೈಕ್ಯ ಬಿ)ಉನ್ಮಾದ ಸಿ)ದೇವೇಂದ್ರ ಡಿ)ಚಿದಾನಂದ

೨.ಒಂದು ವಾಕ್ಯದಲ್ಲಿ ಅನೇಕ ಕರ್ತೃ,ಕರ್ಮ ಪದಗಳು ಪುನಃ ಪುನಃ ಬಂದಾಗ ಈ ಲೇಖನ ಚಿನ್ಹೆಯನ್ನು ಬಳಸುತ್ತೇವೆ

ಎ)ವಾಕ್ಯವೇಷ್ಟನ ಚಿಹ್ನೆ ಬಿ)ಭಾವಸೂಚಕ ಚಿಹ್ನೆ ಸಿ)ಅಲ್ಪವಿರಾಮ ಚಿಹ್ನೆ ಡಿ)ಆವರಣ ಚಿಹ್ನೆ

೩.ಸ್ವತಂತ್ರ್ಯವಾಗಿ ನಿಲ್ಲುವಂತಹ ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದನ್ನು____ ವಾಕ್ಯ_______ ಎಂದಿದ್ದಾರೆ.

ಎ) ಸರಳ ವಾಕ್ಯ ಬಿ)ಸಂಯೋಜಿತ ವಾಕ್ಯ ಸಿ)ಮಿಶ್ರ ವಾಕ್ಯ ಡಿ)ಸಾಮಾನ್ಯ ವಾಕ್ಯ

೪.ಕೆಳಗಿನ ಪದಗಳಲ್ಲಿ ಜೋಡುನುಡಿಗೆ ಉದಾಹರಣೆಯಾದ ಪದ

ಎ)ಸರಸರ ಬಿ)ಹಾಲು ಜೇನು ಸಿ)ಅಯ್ಯೋಯ್ಯೋ ಡಿ)ಬೇಗ ಬೇಗ

೫.ಹೋಗು ಪದವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿದಾಗ----

ಎ)ಹೋಗುತ್ತಿದಾನೆ ಬಿ)ಹೋಗುವನು ಸಿ)ಹೋಗುತ್ತಿದ್ದಾನೆ ಡಿ)ಹೋಗಿದ್ದನು

೬.ಲಗು ಗುರು ಮದ್ಯದಲ್ಲಿ ಕಂಡುಬರಲು_____ಗಣ

ಎ)ಮನ ಗಣ ಬಿ)ಸತ ಗಣ ಸಿ)ಜರ ಗಣ ಡಿ)ಭಯ ಗಣ

**ಆ) ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂದಿ ಪದವನ್ನು ಬರೆಯಿರಿ** **4x1=4**

೭. ಸಾವಿತ್ರಿಯಲ್ಲಿ : ಅಧಿಕರಣ :: ಭೀಮನಿಗೆ :______

೮. ಮಹೇಶ : ಅಂಕಿತನಾಮ :: ಶಿಕ್ಷಕ : ______

೯. ಸೆಪ್ಟೆಂಬರ್ ೦೫ : ಶಿಕ್ಷಕರ ದಿನಾಚರಣೆ :: ನವೆಂಬರ್ ೧೪ :______

೧೦. ತರಕ್ಷು : ಹುಲಿ :: ಹರಿಣ :_______

**ಇ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲ ಉತ್ತರಿಸಿ.** **10x1=10**

೧೧.ಯಕ್ಷಗಾನದ ಪಾತ್ರಧಾರಿ ಸಾಹೇಬನು ಏನೆಂದು ಹೆಸರಾಗಿದ್ದನು?

೧೨.ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ?

೧೩.ಶ್ರೀ ವೈಷ್ಣವರೊಡನೆ ಮಹಾರಾಜನು ಏನು ಹೇಳಿದನು?

೧೪.ರಾಧಾಕೃಷ್ಣನ್ ಅವರ ತಂದೆಯ ಅಪೇಕ್ಷೆ ಏನಾಗಿತ್ತು?

೧೫.ಮಾರಿದತ್ತನ ಬಳಿಯಿದ್ದ ತಳಾರನ ಹೆಸರೇನು?

೧೬.ಆಸ್ಥಾನ ಭವನದೊಳಗೆ ರಾಜನು ಹೇಗೆ ಶೋಭಿಸುವನು?

೧೭ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?

೧೮.ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು?

೧೯.ರಂಜಾನ್ ಹಬ್ಬದ ಸಂದರ್ಭದಲ್ಲಿ ತಯಾರಿಸುವ ಖಾದ್ಯಗಳಾವುವು?

೨೦.ಗುಣಸಾಗರಿ ಪಂಢರಿಬಾಯಿಯವರ ತಂದೆ ತಾಯಿಯ ಹೆಸರೇನು?

**ಈ) ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **11x2=22**

೨೧.ಪಂಡರಿಬಾಯಿಯವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?

೨೨.ಅಭಯರುಚಿಯು ಅಭಯಮತಿಗೆ ಏನೆಂದು ಧೈರ್ಯವನ್ನು ಹೇಳಿದನು?

೨೩.ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೋಗಳಬೇಕೆಂದು ಕವಿ ಬಯಸುವನು?

೨೪.ಬೇಡ ಏನು ಮಾಡಿದನು?

೨೫.ಈ ಹಾಡು ಹೊಸತು ಎಂದು ಹೇಳಲು ಕಾರಣವೇನು?

೨೬..ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.

೨೭.ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳಾವುವು?

೨೮.ಜಂತ್ರ ಮಂತ್ರದ ವಿಶೇಶತೆಯನ್ನು ಪರಿಚಯ ಮಾಡಿಕೊಡಿ.

೨೯.ಹುಸೇನ್ ಕೃಷ್ಣನ ಅಭಿನಯದ ಬಗ್ಗೆ ತಿಳಿಸಿ.

೩೦.ಬಸವ ಕೇಂದ್ರದವರು ನಾಗರಪಂಚಮಿಯ ದಿನ ಮೈಕಿನಲ್ಲಿ ಏನೆಂದು ಹೇಳಿ ಜಾಗೃತಿ ಮೂಡಿಸುತ್ತಿದ್ದರು?

೩೧. ಮಾರಿದತ್ತ ಹಾಗೂ ಜನರು ಏಕೆ ಒಂದೆಡೆ ಸೇರಿದರು?

**ಉ) ಈ ಕೆಳಗಿನ ಕವಿ ಅಥವಾ ಲೇಖಕರ ಸ್ಥಳ,ಕಾಲ,ಕೃತಿ,ಬಿರುದು ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2x2=4**

೩೨.ಶಿವರಾಮ ಕಾರಂತ ೩೩.ರತ್ನಾಕರವರ್ಣಿ

**ಊ) ಈ ಕೆಳಗಿನ ವಾಕ್ಯವೃಂದಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ತಿಳಿಸಿ.** **1X2=2**

೩೪.ಸಂದ ಕಾರಿರುಳು ಕನ್ನೆಯರು ಹಗಲಂ ನೋಡ।
ಲೆಂದು ಬಂದರೊ ಸುರಾಸುರರಬುಧಿಯಂ ಮಥಿಸು।
ವಂದು ಹೊಸ ವಿಷದ ಹೊಗೆ ಹೊಯ್ದು ಕಗ್ಗನೆ ಕಂದಿ ಜಲದೇವಿಯರು॥

**ಋ) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ.ಲಕ್ಷಣದೊಂದಿಗೆ ಸಮನ್ವಯಿಸಿ.** **1X2=2**

೩೫.ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

**ಎ) ಈ ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ.** **1X2=2**

೩೬.ದೂರದ ಬೆಟ್ಟ ನುಣ್ಣಗೆ ಅಥವಾ ಮಾಡಿದುಣ್ಣೋ ಮಹಾರಾಯ

**ಏ) ಈ ಕೆಳಗಿನ ವಾಕ್ಯಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.** **7X2=14**

೩೭."ಅವರು ನಿಮ್ಮೆದುರಿಗೆ ಬಂದರೆ ಏನು ಮಾಡುತ್ತೀ?"

೩೮."ಚಾವಡಿಗಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ"

೩೯."ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ನಿವಾರಿಸಲಾಗದ ತೊಡಕೆಂದು ಭಾವಿಸಲಿಲ್ಲ"

೪೦."ಚಂದಿರನೋ ಭಾಸ್ಕರನೋಯೆಂಬಂತೆ"

೪೧."ನಡೆಗುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"?

೪೨."ಅಭೀತೆಯಾಗೆಲಗೆ ತಾಯೆ ಮರಣದ ದೆಸೆಯೊಳ್"

೪೩."ಈ ಮಾಡಿದ ಕಟ್ಟಳೆಯನು ಅವನೊಬ್ಬನು ಮೀರಿದವನು ರಾಜದ್ರೋಹಿಯಪ್ಪನು"

**ಐ) ಈ ಕೆಳಗಿನ ಪದ್ಯ ಬಾಗವನ್ನು ಪೂರ್ಣಗೊಳಿಸಿ.** **1X3=3**

೪೪.ಅಂಬುಜವೆಲ್ಲವು__________ ಅಥವಾ ನವಭಾವ________________
____________________ ______________________
____________________ ______________________
____________ಮರೆದುದಲ್ಲಲ್ಲಿ. __________ವೀರಧ್ವನಿಯೇರಬೇಕು.

**ಒ) ಈ ಕೆಳಗಿನ ಪದ್ಯಭಾಗವನ್ನು ಒದಿಕೊಂಡು ಅದರಲ್ಲಿ ಅಡಕವಾಗಿರುವ ಸಾರಾಂಶವನ್ನು ಬರೆಯಿರಿ** **1X3=3**

೪೫.ಸಿಸಿರಮನೆ ಪಡೆದು ಪರಕೆಗೆ
ವಸಂತನರ್ಪೋದ ಮಾವಿನಡಿಮಂಚಿಕೆಯೊಳ್

ಕುಸುರಿದರಿದಡಗಿನಗತೆವೊ

ಲೆಸೆದುವು ತದ್ವನದೊಳಿರ್ದ ಮುತ್ತದ ಮುಗುಳ್ಗಳ್॥

**ಓ)ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **2X3=6**

೪೬.ಗೊರೂರು ಹಾಗೂ ಮೌಲ್ವಿಯ ನಡುವೆ ನಡೆದ ಸಂಭಾಷಣೆಯನ್ನು ಸಂಕ್ಷೇಪಿಸಿ ಬರೆಂಯಿರಿ.

**ಅಥವಾ**

ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ಬರೆಯಿರಿ

೪೭.ಭರತ ಚಕ್ರವರ್ತಿಯ ರಾಜದರ್ಬಾರಿನ ವೈಭವವನ್ನು ಕುರಿತು ವಿವರಿಸಿ.

**ಅಥವಾ**

ಪಾರಿವಾಳ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಔ) ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **2X2=4**

೪೮.ಪವಾಡ,ಮೂಡನಂಬಿಕೆ,ಮಾಟ,ಮಂತ್ರ ಮುಂತಾದವುಗಳ ಬಗ್ಗೆ ವಿಜ್ಞಾನದ ಸಭೆ ಸಮಾರಂಭಗಳಲ್ಲಿ ಚರ್ಚಿಸಬೇಕು.ಸಮಾಜದ ಮೇಲೆ ಪ್ರಭಾವ ಬೀರುತ್ತಿರುವ ಸಮಸ್ಯೆಗಳಿಂದ ವಿಜ್ಞಾನಿಗಳು ವಿಮುಖರಾಗಿರುವುದು ಸಾದ್ಯವಿಲ್ಲ.ವಿಜ್ಞಾನಿ ತನ್ನ ಶೋಧನೆಯ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕು.ಸಂಶೋಧನೆ ನಾಲ್ಕು ಗೋಡೆಗಳ ಮದ್ಯಕ್ಕೆ ಸೀಮಿತವಾಗಿರದೆ ಜನರ ನಿತ್ಯ ಜೀವನದ ಸಮಸ್ಯೆಗಳೂ ಆತನ ಸಂಶೋಧನಾ ಕ್ಷೇತ್ರವಾಗಬೇಕು.ಹಲವಾರು ಅತಾರ್ಕಿಕವಾದ ನಡಾವಳಿಗಳಿಂದ ಸಮಾಜದ ಅನ್ಯಾಯಕ್ಕೆ ಒಳಪಟ್ಟಿದ್ದು ಉಸಿರು ಕಟ್ಟುವ ವಾತಾವರಣವಿದೆ.ಅದನ್ನು ಶುದ್ಧಿಗೊಳಿಸುವಲ್ಲಿ ವಿಜ್ಞಾನಿಗಳು ಇನ್ನೂ ಪ್ರಯತ್ನಿಸದೇ ಇರುವುದು ಸರಿಯಲ್ಲ.

ಅ)ವಿಜ್ಞಾನಿಗಳು ವಿಮುಖರಾಗದೆ ಕೈಗೊಳ್ಳಬೇಕಾದ ಕಾರ್ಯಗಳು ಯಾವುವು?

ಆ)ಸಂಶೋಧನೆಯ ಬಗ್ಗೆ ಲೇಖಕರ ಅಭಿಪ್ರಾಯವೇನು?

**ಅಂ)ಕೆಳಗಿನ ಯಾವುದಾದರೂ ಒಂದಕ್ಕೆ ಮಾಹಿತಿಯನ್ನು ಆದರಿಸಿ ಪತ್ರ ಬರೆಯಿರಿ** **1X4=4**

೪೯. ನಿಮ್ಮನ್ನು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಪ್ರೌಢ ಶಾಲೆ ಶಿವಮೊಗ್ಗ ಇಲ್ಲಿ ಒದುತ್ತಿರುವ ವಿದ್ಯಾರ್ಥಿ ಎಂದು ಭಾವಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರು ಪ್ರಕಟಿಸಿರುವ ಕನ್ನಡ ವ್ಯಾಕರಣ ದರ್ಶಿನಿ ಪುಸ್ತಕವನ್ನು ಕಳುಹಿಸಿಕೊಡುವಂತೆ ಕೋರಿ ಪ್ರಕಾಶಕರಿಗೆ ಒಂದು ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮ ಶಾಲೆಯಲ್ಲಿ ಆಚರಿಸುವ ಶಾಲಾ ವಾರ್ಷಿಕೋತ್ಸವಕ್ಕೆ ಬರುವಂತೆ ಕೋರಿ ಕೋಲಾರದಲ್ಲಿರುವ ನಿಮ್ಮ ಸ್ನೇಹಿತೆಯಾದ ರಮ್ಯಾಗೆ ಒಂದು ಪತ್ರವನ್ನು ಬರೆಯಿರಿ.

**ಐ) ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಎರಡು ಪುಟಗಳಿಗೆ ಮಿರದಂತೆ ಪ್ರಬಂಧ ಬರೆಯಿರಿ**

೫೦. ಮಳೆಕೊಯ್ಲು **1X4=4**

**ಅಥವಾ**

ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ದೂರದರ್ಶನದ ಪಾತ್ರ